# ‘ಆಶಾ’ ಸ್ವಯಂಸೇವಕರಿಗೆ ಮಾನವ ಕಳ್ಳಸಾಗಣೆ ನಿಯಂತ್ರಣ ಕುರಿತಾದ ಕಾರ್ಯಾಗಾರ



ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಯುನಿಸೆಫ್ ಜಿಲ್ಲಾ ಮಕ್ಕಳ ಹಕ್ಕುಗಳ ಸಂರಕ್ಷಣಾ
ಯೋಜನೆ ಸಾರ್ವಜನಿಕ ಆರೋಗ್ಯ ಇಲಾಖೆ–ರಾಯಚೂರ

**ರಾ**ಯಚೂರ ಜಿಲ್ಲಾಡಳಿ, ಜಿಲ್ಲಾ ಪಂಚಾಯ್ತಿ, ಯುನಿಸೆಫ್ ಜಿಲ್ಲಾ ಮಕ್ಕಳ ಹಕ್ಕುಗಳ ಸಂರಕ್ಷಣಾ ಯೋಜನೆ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆ ಜಂಟಿಯಾಗಿ ಆಶಾ ಸ್ವಯಂಸೇವಕರಿಗೆ ಮಾನವ ಕಳ್ಳಸಾಗಣೆ ನಿಯಂತ್ರಣದ ಕುರಿತಾದ ಕಾರ್ಯಾಗಾರವನ್ನು ಏರ್ಪಡಿಸಿದ್ದವು. ರಾಯಚೂರ ನಗರದ ರಂಗಮಂದಿರದಲ್ಲಿ ಫೆಬ್ರುವರಿ 7, 2011ರಂದು ಒಂದು ದಿನದ ಈ ಕಾರ್ಯಾಗಾರ ನಡೆಯಿತು.

ಜಿಲ್ಲಾಧಿಕಾರಿ ವಿ ಅನ್ಬು ಕುಮಾರ್ ಅವರು ಕಾರ್ಯಾಗಾರವನ್ನು ಉದ್ಘಾಟಿಸಿದರು. ಜಿಲ್ಲಾ ಮಕ್ಕಳ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ವೀಣಾ ಪಲ್ಲಕ್ಕಿ, ಯುನಿಸೆಫ್ ಜಿಲ್ಲಾ ಮಕ್ಕಳ ಹಕ್ಕುಗಳ ಸಂರಕ್ಷಣಾ ಯೋಜನೆಯ ನಿರ್ವಾಹಕ ಕೆ ರಾಘವೇಂದ್ರ ಭಟ್ ದಿನವಿಡೀ ಸಂಕಿರಣದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಜಿಲ್ಲಾ ಆರೋಗ್ಯಾಧಿಕಾರಿ, ಆರೋಗ್ಯ ಇಲಾಖೆಯ ಹಲವಾರು ಅಧಿಕಾರಿಗಳು ಉದ್ಘಾಟನಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಸುಮಾರು ಇನ್ನೂರಕ್ಕಿಂತ ಹೆಚ್ಚು 'ಆಶಾ' ಸ್ವಯಂಸೇವಕರು ದಿನದುದ್ದಕ್ಕೂ ನಡೆದ ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬ ಸ್ವಯಂ ಸೇವಕಿಗೂ ಮಕ್ಕಳ ಹಕ್ಕುಗಳ ಸಂರಕ್ಷಣೆಯ ಕುರಿತಾದ ಮಾಹಿತಿಗಳುಳ್ಳ 'ಕಿಟ್' ನೀಡಲಾಯಿತು. ಸಂಪನ್ಮೂಲ ವ್ಯಕ್ತಿಗಳು ವಿವಿಧ ಗೋಷ್ಠಿಗಳಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣಾ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳ ಪರಿಚಯ ಮಾಡಿಕೊಟ್ಟರು. ಸಂಕಿರಣದಲ್ಲಿ ಭಾಗವಹಿಸಿದ್ದ ಸ್ವಯಂ ಸೇವಕರು ಮಕ್ಕಳ ಹಕ್ಕುಗಳ ಸಂರಕ್ಷಣಾ ಕಾನೂನಿನ ಕುರಿತು ಹಲವಾರು ಪ್ರಶ್ನೆಗಳನ್ನು ಕೇಳಿದರು. ಸಂಪನ್ಮೂಲ ವ್ಯಕ್ತಿಗಳು ಆ ಎಲ್ಲ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಿದರು.

ಕಾರ್ಯಾಗಾರ ಉದ್ಘಾಟಿಸಿದ ಜಿಲ್ಲಾಧಿಕಾರಿ ವಿ ಅನ್ಬು ಕುಮಾರ್ ಅವರು, "ಮಾನವ ಕಳ್ಳ ಸಾಗಣೆ ನಿಯಂತ್ರಣ ಮತ್ತು ಮಕ್ಕಳ ಹಕ್ಕುಗಳ ಸಂರಕ್ಷಣೆ ಬಗ್ಗೆ ಜಿಲ್ಲೆಯ ಹೆಚ್ಚಿನೆಲ್ಲ ಇಲಾಖೆಗಳ ಅಧಿಕಾರಿಗಳಿಗೆ ನಾವು ತರಬೇತಿ ನೀಡಿದ್ದೇವೆ. ಸರ್ಕಾರಿ ಆಡಳಿತ ಯಂತ್ರದೊಂದಿಗೆ ಜನಸಾಮಾನ್ಯರೂ ಕೈಜೋಡಿಸಿದರೆ ಈ ಸಾಮಾಜಿಕ ಪಿಡುಗುಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಿಯಂತ್ರಿಸಲು ಮತ್ತು ಅಳಿಸಲು ಸಾಧ್ಯ. ಅದನ್ನು ಗಮನದಲ್ಲಿಟ್ಟುಕೊಂಡು ಆಶಾ ಸ್ವಯಂಸೇವಕರಿಗೆ ಈ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಸಮಾಜದ ಬೇರು ಮಟ್ಟದಲ್ಲಿ ಗ್ರಾಮೀಣ ಮಹಿಳೆಯರ ಜೊತೆ ನೀವು ಸದಾ ಸಂಪರ್ಕದಲ್ಲಿರುತ್ತೀರಿ. ಅವರು ಗರ್ಭಿಣಿಯಾದ ಸಂದರ್ಭದಿಂದ ಹಿಡಿದು, ಮಗು ಹುಟ್ಟುವ ವೇಳೆ ಹಾಗೂ ಆನಂತರದಲ್ಲಿ ಕೂಡ ನೀವುಗಳು ತಾಯಂದಿರ ಜೊತೆ ಸಂಪರ್ಕದಲ್ಲಿರುತ್ತೀರಿ. ಆ ಹಂತದಲ್ಲಿಯೇ ಮಕ್ಕಳ ಹಕ್ಕುಗಳ ಸಂರಕ್ಷಣೆಯ ಕುರಿತು

## ಅಂತಿಮ ಗುರಿ

**ರಾ**ಯಚೂರು ತಾಲ್ಲೂಕಿನಲ್ಲಿ ನಡೆಯುತ್ತಿರುವ ಮಾನವ ಕಳ್ಳಸಾಗಣೆ ತಡೆಯಲು ಸಾಮೂಹಿಕ ಯತ್ನ.

**ಜಿ**ಲ್ಲಾಡಳಿತದ ಅಡಿಯಲ್ಲಿ ಬರುವ ಪ್ರತಿಯೊಂದು ಇಲಾಖೆಯ ಅಧಿಕಾರಿಗಳನ್ನು ಈ ಯತ್ನದಲ್ಲಿ ಭಾಗಿಯಾಗಿಸಿಕೊಳ್ಳುವುದು. ಉದಾಹರಣೆಗೆ ಜಿಲ್ಲಾಡಳಿತ, ಸಾರ್ವಜನಿಕ ಶಿಕ್ಷಣ ಇಲಾಖೆ, ಸಾರ್ವಜನಿಕ ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಉಳಿದೆಲ್ಲ ಇಲಾಖೆಗಳು.

**ಅ**ದರೊಂದಿಗೆ ಬೇರು ಮಟ್ಟದಲ್ಲಿ ಸಮುದಾಯದ ನೆರವಿನೊಂದಿಗೆ ಈ ಸಾಮಾಜಿಕ ಪಿಡುಗಿಗೆ ಅಂತ್ಯ ಹಾಡುವುದು.





ನೀವುಗಳ ತಿಳವಳಿಕೆ ನೀಡಬೇಕು. ನಿಮ್ಮ ಸಹಾಯದಿಂದ ರಾಯಚೂರ ತಾಲ್ಲೂಕನ್ನು ಸಂಪೂರ್ಣ ಸಾಮಾಜಿಕ ಪಿಡುಗು ಮುಕ್ತ ಮಾಡುವ ಉದ್ದೇಶ ಇಟ್ಟುಕೊಂಡಿದ್ದೇವೆ" ಎಂದು ಹೇಳಿದರು.

"ಗ್ರಾಮೀಣ ಪ್ರದೇಶದಲ್ಲಿ ಮಾನವ ಕಳ್ಳಸಾಗಣೆಯ ನಿಯಂತ್ರಣ ತೀರಾ ಅಗತ್ಯ. ಆ ನಿಟ್ಟಿನಲ್ಲಿ ಆಶಾ ಸ್ವಯಂಸೇವಕರು ಮಹತ್ವದ ಪಾತ್ರ ವಹಿಸುತ್ತಾರೆ" ಎಂದು ವೀಣಾ ಪಲ್ಲಕ್ಕಿ ಅವರು ಅಭಿಪ್ರಾಯ ಪಟ್ಟರು. ಕೆ ರಾಘವೇಂದ್ರ ಭಟ್ ಅವರು ಮಕ್ಕಳ ಹಕ್ಕುಗಳ ಸಂರಕ್ಷಣೆಗೆ ಇರುವ ಕಾನೂನುಗಳ ಕಿರು ಪರಿಚಯ ಮಾಡಿಕೊಟ್ಟರು. ಜನ ಸಾಮಾನ್ಯರು ಯಾವ ರೀತಿಯಲ್ಲಿ ಕಾನೂನಿನ ಸಹಾಯದಿಂದ ಮಕ್ಕಳ ಹಕ್ಕುಗಳ ಸಂರಕ್ಷಣೆ ಮಾಡಬಹುದು ಎನ್ನುವುದನ್ನು ಅವರು ಮನನ ಮಾಡಿಕೊಟ್ಟರು. ಬಾಲಕಾರ್ಮಿಕ ಪದ್ಧತಿ ಜಾರಿಯಲ್ಲಿದ್ದರೆ, ಬಾಲ್ಯ ವಿವಾಹ ನಡೆಯುತ್ತಿದ್ದರೆ ಅಥವಾ ಮಕ್ಕಳ ಕಳ್ಳಸಾಗಣೆಯಾಗುತ್ತಿದ್ದರೆ ಅದನ್ನು ಪೊಲೀಸರ ಸಹಾಯದಿಂದ ಹೇಗೆ ತಡೆಯಬಹುದು ಎಂದು ಅವರ ವಿವರ ನೀಡಿದರು.

ಕಾರ್ಯಾಗಾರದಲ್ಲಿ ಭಾವಹಿಸಿದ್ದ ಕೆಲವು ಆಶಾ ಸ್ವಯಂಸೇವಕಿಯರು ಅವರವರ ಗ್ರಾಮಗಳಲ್ಲಿನ ಕೆಲವು ಪ್ರಕರಣಗಳನ್ನು ಬೆಳಕಿಗೆ ತಂದು, ಅವುಗಳನ್ನು ಹೇಗೆ ಪರಿಹಾರ ಮಾಡಬಹುದು ಎಂದು ಪ್ರಶ್ನಿಸಿದರು. ಆ ಬಗ್ಗೆ ಸೂಕ್ತ ಕಾನೂನು ಸಲಹೆಯನ್ನು ನೀಡಲಾಯಿತು. ಒಟ್ಟಾರೆ ಒಂದು ದಿನದ ಈ ಕಾರ್ಯಾಗಾರ ಅತ್ಯಂತ ಯಶಸ್ವಿಯಾಯಿತು.



## ಫಲಿತಾಂಶ

**ಬೇ**ರು ಮಟ್ಟದಲ್ಲಿ ಜಾಗೃತಿ ಮೂಡಿಸಿದರೆ ಸಮಸ್ಯೆಯ ಶೇಕಡಾ 50ರಷ್ಟು ಭಾಗ ಅಲ್ಲಿಯೇ ಮಾಯವಾಗುತ್ತದೆ ಎನ್ನುವುದು ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಹೆಚ್ಚಿನೆಲ್ಲ ಆಶಾ ಸ್ವಯಂಸೇವಕರ ಅಭಿಪ್ರಾಯವಾಗಿತ್ತು. ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗುವುದಾಗಿ ಅವರೆಲ್ಲ ಭರವಸೆ ನೀಡಿದರು.

**ಹಾ**ಜರಿದ್ದ ಹೆಚ್ಚಿನ ಆಶಾ ಸ್ವಯಂಸೇವಕರು ಇದೇ ಮೊದಲ ಬಾರಿಗೆ ಮಕ್ಕಳ ಹಕ್ಕುಗಳ ಸಂರಕ್ಷಣಾ ಕಾನೂನಿನ ಕುರಿತು ತಿಳವಳಿಕೆ ಪಡೆದರು. ಮುಖ್ಯವಾಗಿ ಬಾಲ ಕಾರ್ಮಿಕ ಪದ್ಧತಿ ನಿಷೇಧ, ಬಾಲ್ಯ ವಿವಾಹ ನಿಷೇಧ ಹಾಗೂ ಮಕ್ಕಳ ಅಕ್ರಮ ಕಳ್ಳಸಾಗಣೆ ವಿರೋಧಿ ಕಾನೂನುಗಳ ಪರಿಚಯ ಅವರಿಗಾಯಿತು.

**ಹ**ಳ್ಳಿಗಳಲ್ಲಿರುವ ಪ್ರತಿಯೊಂದು ಮಗುವನ್ನೂ ಕಡ್ಡಾಯವಾಗಿ ಶಾಲೆಗೆ ಸೇರಿಸಿದಲ್ಲಿ, ಅವರೆಲ್ಲ ಹತ್ತನೇ ತರಗತಿಯವರೆಗೆ ಶಾಲೆಯಲ್ಲಿಯೇ ಇರುವಂತೆ ನೋಡಿಕೊಂಡಲ್ಲಿ ಮೇಲಿನೆಲ್ಲ ಸಾಮಾಜಿಕ ಪಿಡುಗಗಳು ಕಡಿಮೆಯಾಗುತ್ತವೆ ಎನ್ನುವುದು ಆಶಾ ಸ್ವಯಂಸೇವಕರ ಅಭಿಪ್ರಾಯವಾಗಿತ್ತು. ಆ ನಿಟ್ಟಿನಲ್ಲಿ ಕೈಲಾದ ಪ್ರಯತ್ನ ಮಾಡುವುದಾಗಿ ಅವರೆಲ್ಲ ಪಣ ತೊಟ್ಟರು.

## ಆ ನಿಟ್ಟಿನಲ್ಲಿ ನಡೆದ ಪ್ರಯತ್ನಗಳು

**ರಾ**ಯಚೂರು

ತಾಲ್ಲೂಕಿನಾದ್ಯಂತ ಮಾನವ ಕಳ್ಳ ಸಾಗಣೆ ನಿಯಂತ್ರಣದ ಕುರಿತಾದ ತರಬೇತಿ ಮತ್ತು ಕಾರ್ಯಾಗಾರಗಳ ಆಯೋಜನೆ. ಮುಖ್ಯವಾಗಿ ಗ್ರಾಮ ಪಂಚಾಯ್ತಿಯಲ್ಲಿರುವ ಮಾನವ ಕಳ್ಳಸಾಗಣಿಕೆ ನಿಯಂತ್ರಣ ಸಮಿತಿ (ಎಟಿಸಿ)ಯ ಸದಸ್ಯರಿಗೆ ತರಬೇತಿ.

**ಆ**ಶಾ ಸ್ವಯಂಸೇವಕರು

ಗ್ರಾಮೀಣ ಪ್ರದೇಶದೆಲ್ಲೆಡೆ ಬೇರು ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಇವರನ್ನು ಜಾಗೃತಗೊಳಿಸುವ ಮೂಲಕ ಬೇರು ಮಟ್ಟವನ್ನು ಜಾಗೃತಗೊಳಿಸುವುದು.

**ಆ**ಶಾ ಸ್ವಯಂಸೇವಕರು

ಗ್ರಾಮೀಣ ಪ್ರದೇಶದ ಮಹಿಳೆಯರ ಜೊತೆ ನೇರ ಸಂಪರ್ಕದಲ್ಲಿರುತ್ತಾರೆ. ಇವರ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವುದು.